# ಹೊನ್ನಿನಂತಹ ಕೊನ್ನೆ ಹೂವು

**ಮರದ ತುಂಬ ಹಳದಿ ಹೂವುಗಳಿಂದ ಕಂಗೊಳಿಸುವ ಇದು ಕೊನ್ನೆ ಹೂವು. ಇದನ್ನು ಕಕ್ಕೆ ಹೂವು ಎಂದೂ ಕರೆಯಲಾಗುತ್ತಿದೆ. ಮಾರ್ಚ್ ತಿಂಗಳಿನಿಂದ ಮೇ ತಿಂಗಳವರೆಗೂ ಕೊನ್ನೆ ಮರ ಹೂವುಗಳ ಚೆಲುವಿನಿಂದ ಕಂಗೊಳಿಸುತ್ತದೆ.**

**■ ವೇದಾವತಿ ಎಚ್.ಎಸ್.**

ಮಾರ್ಚ್ ತಿಂಗಳಿಂದ ಮೇ ಕೊನೆಯವರೆಗೂ ಹಳದಿ ಹೂವಿನಿಂದ ಗೊಂಚಲು ಗೊಂಚಲಾಗಿ ಕಂಗೊಳಿಸುವ ಈ ಮರದ ಹೂವುಗಳು ನೋಡುಗರ ಮನಸ್ಸನ್ನು ಉಲ್ಲಾಸಗೊಳಿಸುತ್ತದೆ. ಇದೇ ಕೊನ್ನೆ ಹೂವು. ಇದನ್ನು ಕಕ್ಕೆ ಹೂವು ಎಂದೂ ಅಂಗ್ಲ ಭಾಷೆಯಲ್ಲಿ 'ಗೋಲ್ಡನ್ ಶವರ್ ಟ್ರೀಸ್' ಎಂದೂ ಕರೆಯುತ್ತಾರೆ. ಇದನ್ನು ಚಿಕ್ಕ ಗಿಡವಾಗಿದ್ದಾಗ ಆರು ತಿಂಗಳ ಕಾಲ ವಿಶೇಷ ಕಾಳಜಿ ವಹಿಸಿದರೆ ಸಾಕಾಗುತ್ತದೆ. ನಂತರದ ದಿನಗಳಲ್ಲಿ ಹಸಿರಿನ ಎಲೆಗಳೊಂದಿಗೆ ದೊಡ್ಡ ಮರವಾಗಿ ಬೆಳೆಯುತ್ತದೆ.

ಈ ಮರದ ಹೂವು ಥಾಯ್ಲೆಂಡ್ ದೇಶದ ರಾಷ್ಟ್ರೀಯ ಪುಷ್ಪವಾಗಿದೆ. ನಮ್ಮ ನೆರೆಯ ಕೇರಳ ರಾಜ್ಯದ ರಾಜ್ಯ ಪುಷ್ಪವೆಂದು ಹೆಸರು ಪಡೆದಿದೆ. ತಮಿಳುನಾಡಿನಲ್ಲೂ ಈ ಹೂವು ಪ್ರಸಿದ್ಧಿ ಪಡೆದಿದೆ. ಅಲ್ಲಿನ ಜನರು ಕೊಂಡ್ರೈ ಎಂದು ಕರೆಯುತ್ತಾರೆ. ಈ ಮರವು ಫಬಸಿ ಕುಟುಂಬಕ್ಕೆ ಸೇರಿದ್ದೂ ಕಾಸಿಯ ಫಿಸ್ಟೂಲ ಎಂಬ ಸಸ್ಯರಾಶಿಗೆ ಸೇರಿದೆ. ಇದನ್ನು ಸಂಸ್ಕೃತದಲ್ಲಿ ಸುವರ್ಣಕ, ಮಲಯಾಳದಲ್ಲಿ 'ಕೊನ್'ಎಂದೂ ಕರೆಯುತ್ತಾರೆ ಹಾಗೆಯೇ ಇಂಡಿಯಾನಾ ಲಬರ್ನಮ್ ಎಂಬ ಹೆಸರಿನಿಂದಲೂ ಕರೆಯುತ್ತಾರೆ.

ಈ ಹೂಗಳನ್ನು ಅಲಂಕಾರಕ್ಕೆ ಬಳಸುವ ಜನರೇ ಜಾಸ್ತಿ. ಇದರ ಕಾಯಿ ಮತ್ತು ಹೂವು ಆಯುರ್ವೇದ ಔಷಧಿಗಳಲ್ಲಿ ಬಳಕೆ ಮಾಡಲಾಗುತ್ತಿದೆ. ಹೆಚ್ಚಾಗಿ ಆಯುರ್ವೇದದ ಔಷಧೀಯ ಪದ್ಧತಿಯಲ್ಲಿ ವಾತ ಸಂಬಂಧಿ ಔಷಧಿಗೆ ಬಳಕೆ ಮಾಡುತ್ತಾರೆ. ಇದರ ಕಾಯಿಗಳು ಎರಡು ಮೀಟರ್ ಉದ್ದವಿದ್ದು ಕಂದು ಬಣ್ಣದಿಂದ ಮರದಲ್ಲಿ ನೇತಾಡುತ್ತಿರುತ್ತದೆ. ಈ ಮರದ ತೊಗಟೆಯನ್ನು ಚರ್ಮ ಹದ ಮಾಡಲು ಬಳಸುತ್ತಾರೆ. ಎಲ್ಲದಕ್ಕಿಂತಲೂ ಅದರ ಹೂವುಗಳು ಆಕರ್ಷಣೀಯವಾಗಿರುತ್ತದೆ.

ಕೇರಳ ರಾಜ್ಯದಲ್ಲಿ ವಿಷುವಿನ ದಿನ ಈ ಹೂವಿಗೆ ಆದ್ಯತೆಯಿದೆ. ಹಳದಿ ಬಣ್ಣದಲ್ಲಿರುವ ಈ ಹೂವನ್ನು 'ಕಣಿ' (ದೇವರಿಗೆ ಸಮರ್ಪಿಸುವ ಹೂವು ಹಣ್ಣುಗಳು) ಯಲ್ಲಿರಿಸಿ ಪೂಜಿಸಲಾಗುತ್ತದೆ. ಕೊನ್ನೆ ಹೂವು ಇಲ್ಲದೆ ಮಲೆಯಾಳಿಗರು 'ವಿಷು ಕಣಿ' ಆಚರಣೆ ಮಾಡುವುದೇ ಇಲ್ಲ. ವಿಷು ದಿನ ಮಾತ್ರ ಈ ಹೂವನ್ನು ದೇವರಿಗೆ ಅರ್ಪಿಸುವ ಸಂಪ್ರದಾಯ ಅವರಲ್ಲಿದೆ. ಇನ್ನೊಂದು ವಿಶೇಷವೆಂದರೆ ಬೇರೆ ದಿನಗಳಲ್ಲಿ ಈ ಮರದ ಹೂವುಗಳನ್ನು ಮಲೆಯಾಳಿಗರು ದೇವರಿಗೆ ಅರ್ಪಿಸದೇ ಇರುವುದು ಸಹ ಅವರ ಸಂಪ್ರದಾಯದ ವಿಶೇಷತೆ. ■

